# ಮಿಡ್‌ನೈಟ್ ನಟಿ ಬಂದರಾದರೂ...

ಜೋಳಿಗೆಯಂಥ ಒಂದು ಚೀಲ ನೇತುಹಾಕಿಕೊಂಡಿದ್ದ ತಮ್ಮ ಒಂದೆಡೆ. ಇನ್ನೊಂದೆಡೆ ಅಣ್ಣನ ಮೊಬೈಲ್‌ನಲ್ಲಿ ಅವ್ಯಾಹತವಾಗಿ ಮೆಸೇಜುಗಳ ವಿಲೇವಾರಿ. ಕುಡಿತದ ದುಷ್ಪರಿಣಾಮಗಳ ಹಾಗೂ ಕುಡುಕರ ಫಿಲಾಸಫಿಗಳ ಕುರಿತು ಚರ್ಚಿಸುವ ಸಿನಿಮಾ ಅದು.

ಚಿತ್ರೀಕರಣ ಶುರುವಾಗಿ ಕೆಲವು ದಿನಗಳು ಉರುಳಿದ್ದವಷ್ಟೆ. ಬೆಂಗಳೂರು ಹೊರವಲಯದ ಮದ್ಯದಂಗಡಿಯಲ್ಲೇ ಚಿತ್ರೀಕರಣ. ಬ್ರಾಂಡ್‌ಗಳ ಹೆಸರು ಕಾಣದಂತೆ ಎಲ್ಲಾ ಬಾಟಲುಗಳನ್ನು ಎಚ್ಚರಿಕೆಯಿಂದ ಜೋಡಿಸಿಟ್ಟಿದ್ದರು. ಅಂಗಡಿಯ ಹೊರಗೆ ಊಟದ ವ್ಯವಸ್ಥೆ ಮಾಡಲಾಗಿ, ಕೆಲವರು ಭೋಜನಕ್ಕೂ ಮೊದಲು ನಾಲಗೆ ನೆನೆಸಿಕೊಳ್ಳುವ ಸಾಧ್ಯತೆಯತ್ತ ಉತ್ಸಾಹ ತೋರಿದರು. ಆದರೆ, ಅದು ಫಲಕಾರಿಯಾಗಲಿಲ್ಲ. ಚಿತ್ರೀಕರಣದ ಉದ್ದೇಶಕ್ಕೆಂದು ಹೋಗಿದ್ದ ಆ ಜಾಗದಲ್ಲಿ ಅದು ನಿಷಿದ್ಧ ಎಂದು ಚಿತ್ರತಂಡ ಪ್ರಾಮಾಣಿಕವಾಗಿ ಹೇಳಿಕೊಂಡಿತು.

ಹೇಳಿಕೇಳಿ ಹಾಸ್ಯನಟರಾಗಿದ್ದ ಮೆಸೇಜು ಮೋಹಿ ಅಣ್ಣ, ನಟರ ದಂಡನ್ನು ಆ ಸಿನಿಮಾಗೆ ಆಹ್ವಾನಿಸುವುದರಲ್ಲಿ ನಿರತರಾಗಿದ್ದರು. ಹಾಸ್ಯ ಕ್ಷೇತ್ರದಲ್ಲಿ ತುಸು ಜನಪ್ರಿಯರಾಗಿದ್ದರೂ ಸಾಕು, ಅಂಥವರನ್ನೆಲ್ಲಾ ಎಳೆದು ತರುವ ಸಂಕಲ್ಪ ಅವರದ್ದು. ಆ ಸಿನಿಮಾ ನಿರ್ದೇಶಕ ಆಗಿನ್ನೂ ಪಳಗುತ್ತಿದ್ದವರು. ಕಾರಿನಲ್ಲಿ ಸಾಗುವಾಗ ಒಮ್ಮೆ ಹೇಳಿದ ಕಥಾಎಳೆ ಹಿಡಿಸಿದ್ದೇ, ಕುಡುಕರ ಫಿಲಾಸಫಿಯ ಆ ಸಿನಿಮಾ ತಯಾರಿಸಲು ಹಾಸ್ಯನಟ ನಿರ್ಧರಿಸಿದ್ದರು. ತಾವೇ ಹಣ ಹೂಡಿದ ಆ ಸಿನಿಮಾದಲ್ಲಿ ಅಭಿನಯಿಸಲು ಒಪ್ಪಿದ ಬಹುತೇಕರು ಸಂಭಾವನೆ ಪಡೆಯಲಿಲ್ಲವೆನ್ನುವುದು ವಿಶೇಷ. ಕೆಲವರು ಶಾಸ್ತ್ರಕ್ಕೆಂದು ಒಂದು ರೂಪಾಯಿ ಸಂಭಾವನೆ ಪಡೆದು ಸುಮ್ಮನಾದರೆ, ಇನ್ನು ಕೆಲವರು ಕನ್ನಡ ಚಿತ್ರರಂಗಕ್ಕೆ ಒಳಿತು ಮಾಡುವ ಸದುದ್ದೇಶದಿಂದ ಸಂಭಾವನೆ ಪಡೆಯಲಿಲ್ಲವಂತೆ.

ಮಲಯಾಳದ ಮಿಡ್‌ನೈಟ್ ನಟಿ ಆ ಸಿನಿಮಾದಲ್ಲಿ ವಿಭಿನ್ನ ಪಾತ್ರದಲ್ಲಿ ಅಭಿನಯಿಸಲಿದ್ದಾರೆ ಎನ್ನುವುದು ಹೈಲೈಟು. ಅವರ ಕಾಲ್‌ಷೀಟ್ ಸಿಕ್ಕಿತೇ, ಸಿಕ್ಕಿದ್ದಾದರೂ ಹೇಗೆ, ಈಗಲೂ ಅವರು ಹಸಿಬಿಸಿ ಸಿನಿಮಾಗಳಲ್ಲೇ ಅಭಿನಯಿಸುವವರೇ ಎಂಬಿತ್ಯಾದಿ ಪ್ರಶ್ನೆಗಳು ನಿರ್ಮಾಪಕ ಕಂ ಹಾಸ್ಯನಟನಿಗೆ ಎದುರಾದವು. ಕಸಿವಿಸಿಗೊಳಿಸುವ ಆ ಕೆಲವು ಪ್ರಶ್ನೆಗಳಿಗೆ ಕಿಂಚಿತ್ತೂ ವಿಚಲಿತರಾಗದೆ ಗಂಭೀರವಾಗಿಯೇ ಉತ್ತರ ಕೊಟ್ಟರು ಹಾಸ್ಯನಟ: 'ಕಾಲ್‌ಷೀಟ್ ಸಿಕ್ಕಿರುವುದು ನಿಜ. ಡೇಟ್ಸ್ ಯಾವಾಗ ಎನ್ನುವುದು ಇನ್ನೂ ಅಂತಿಮವಾಗಿಲ್ಲ. ಸಿನಿಮಾದ ಔಚಿತ್ಯಕ್ಕೆ ತಕ್ಕಂಥ ಪಾತ್ರ ಇದು. ಅವರು ಹೇಗೆ ಪ್ರತಿಕ್ರಿಯಿಸುವರೋ ನೋಡಬೇಕು'.

ಅವರು ಹೀಗೆ ಹೇಳಿದ ಕೆಲವೇ ದಿನಗಳ ನಂತರ ಮಲಯಾಳದ ನಟಿ ಬಂದು ಅಭಿನಯಿಸಿದರು. ಆ ಚಿತ್ರೀಕರಣ ನೋಡಲು ಚಾತಕಪಕ್ಷಿಗಳಾಗಿದ್ದವರು ಹಲವರು. ಇಡೀ ಚಿತ್ರತಂಡ ನಟಿಯಲ್ಲಿ ಆಗಿರುವ ಬದಲಾವಣೆಯ ಕುರಿತು ಬೇಸರವನ್ನೂ ಆಶ್ಚರ್ಯವನ್ನೂ ವ್ಯಕ್ತಪಡಿಸಿತು. ನಟಿಯ ಹೆಸರಿನ ಕಾರಣಕ್ಕೆ ಒಂದಿಷ್ಟು ಪ್ರಚಾರ ಪಡೆದುಕೊಂಡ ಆ ಸಿನಿಮಾ ಸಭ್ಯತೆಯ ಚೌಕಟ್ಟಿನಲ್ಲೇ ಇದ್ದುದು ವಿಶೇಷ. ಕಡಿಮೆ ಬಜೆಟ್‌ನಲ್ಲಿ ತಯಾರಿಸಿದ್ದರಿಂದ ಒಂದಿಷ್ಟು ಹಣವನ್ನೂ ಮಾಡಿತೆನ್ನಿ. ಆ ಸಿನಿಮಾ ಯಶಸ್ಸಿನಿಂದ ಪ್ರೇರಿತರಾಗಿ ಕೆಲವರು ಅಂಥ ಹಿನ್ನೆಲೆಯ ನಟೀಮಣಿಯರನ್ನು ಚಿತ್ರರಂಗಕ್ಕೆ ಕರೆತರುವ ಪ್ರಯತ್ನ ಮಾಡಿದರಾದರೂ ಸಫಲರಾಗಲಿಲ್ಲ. 'ಬದಲಾವಣೆ ಜಗದ ನಿಯಮ' ಎನ್ನುವ ಮಾತು ಹೀಗೂ ಸಾಕಾರಗೊಳ್ಳುತ್ತದೆ!

**● ವಿಶಾಖ ಎನ್.**

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: **K.N. SHANTH KUMAR.**

Editorial Office: 75, M.G Road, Bengaluru-560 001 E-mail:editormy@mayura.co.in. Phone: 2588 0000,
Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68